

**ಮಗಳು ಶಾಂಭವಿಯ ಒತ್ತಾಯದಿಂದ ರೋಹಿಣಿಯಲ್ಲಿ ಕತೆ, ಕವನ ಬರೆಯುವ ಹುಮ್ಮಸ್ಸು ಚಿಮ್ಮತೊಡಗಿತು. ಬರವಣಿಗೆಯ ಹದವನ್ನು, ಜಾಡನ್ನು ಆಕೆ ಹಲವು ವರ್ಷಗಳ ಬಳಿಕ ಮತ್ತೆ ಕಂಡುಕೊಂಡಳು.**

"ಕಾಗೆ ನೆಂಟ್ರನ್ನ ಕರೀತಿದೆ ಅಮ್ಮಾ. ಮದ್ವ್ಯಾನ ಎಸರಿಗೆ ಒಂದು ಮುಷ್ಟಿ ಅಕ್ಕಿ ಜಾಸ್ತಿ ಹಾಕನಿ..." ಅಂದಳು ಮೊಂಡು ಹಿಡಿಯಿಂದ ಕರಪರ ಅಂಗಳ ಗುಡಿಸುತ್ತಿದ್ದ ನಾಗಿ.

"ಬರ್ಲಿ, ಬರ್ಲಿ, ಇವತ್ತು ಪರಮಾನ್ನ ಮಾಡಿದೀನಿ. ಬೆಳಗಿಂದ ರಾತ್ರೀವರೆಗೆ ಗಂಜಿ ಊಟ..." ಉತ್ತರಿಸಿದಳು, ಅಲ್ಲೇ ಮುಂಚೇಕಡೆ ಜಗುಲಿಯಲ್ಲಿ ಕಾಲ ಕೆಳಗೊಂದು ಸ್ಟೂಲ್ ಇಟ್ಟುಕೊಂಡು ಗಂಡನ ಪಟಕ್ಕೆ ಮಾಗಿ ಮಲ್ಲಿಗೆ ಮಾಲೆ ಹಾಕುತ್ತಿದ್ದ ರೋಹಿಣಿ. ದಿನಕ್ಕೊಂದು ಬಗೆಯ ಹೂಹಾರದಿಂದ ಅಯ್ಯನ ಪಟ ಶೋಭಿಸುವುದನ್ನು ಕಂಡರೆ ಅದೇನೋ ಅವರ ಸೇವೆ ಮಾಡಿದಂತಾ ಕೃತಾರ್ಥ ಭಾವ ನಾಗಿಗೆ. ದಿನವೂ ಬೆಳಗಾಮುಂಚೆ ತಟ್ಟೆ ತುಂಬಾ ಹೂ ಕುಯ್ದು ತಂದಿಟ್ಟಿರುತ್ತಿದ್ದಳು. ಅವಳು ತಂದಿಡುತ್ತಿದ್ದ